# ಜೀವಸಾರ್ಥಕತೆಯ ಅಂಗಾಂಗ ದಾನ ಕ್ರಾಂತಿ!



ಅಂಗಾಂಗ ದಾನ, ಅಂಗಾಂಶ ಕಸಿಯಲ್ಲಿ ಅತ್ಯುತ್ತಮ ಸಾಧನೆ; ರಾಷ್ಟ್ರಮಟ್ಟದಲ್ಲಿ ಅಂಗಾಂಗ ದಾನ ಪ್ರತಿಜ್ಞೆಯಲ್ಲಿ 3ನೇ ಸ್ಥಾನ, ದೇಶದ 2ನೇ ಅತ್ಯುತ್ತಮ ಜೀವಸಾರ್ಥಕತೆ (SOTTO) ಪ್ರಶಸ್ತಿಯ ಗರಿ!

‘ಅಂಗಾಂಗ ದಾನ ಪ್ರಕ್ರಿಯೆ ಸರಳೀಕರಿಸಲು ರಾಜ್ಯದ ಎಲ್ಲ ಸರ್ಕಾರಿ ವೈದ್ಯಕೀಯ ಕಾಲೇಜು ಆಸ್ಪತ್ರೆಗಳಲ್ಲಿ ಅಂಗಾಂಗ ದಾನ ಸ್ವೀಕರಣಾ ಕೇಂದ್ರದ ಸೌಲಭ್ಯ ಕಲ್ಪಿಸಲಾಗುತ್ತಿದೆ. ಅಂಗಾಂಗ ದಾನ ಮತ್ತು ಕಸಿಗೆ ಸಂಬಂಧಿಸಿದ ರಕ್ತ ಪರೀಕ್ಷೆಗಾಗಿ ಮಂಗಳೂರಿನ ಸರ್ಕಾರಿ ವೆನ್ಲಾಕ್ ಆಸ್ಪತ್ರೆಯಲ್ಲಿ ಬೆಂಗಳೂರು ವೈದ್ಯಕೀಯ ಸೇವೆಗಳ ಟ್ರಸ್ಟ್ (ಬಿಎಂಎಸ್‌ಟಿ) ಸಹಕಾರದಲ್ಲಿ ಪ್ರಯೋಗಾಲಯ ಸ್ಥಾಪಿಸಲಾಗಿದೆ. ಮೈಸೂರು ಮತ್ತು ಶಿವಮೊಗ್ಗದಲ್ಲಿಯೂ ಇದೇ ರೀತಿಯ ಪ್ರಯೋಗಾಲಯ ಸ್ಥಾಪಿಸಲಾಗುವುದು.



**-ದಿನೇಶ್ ಗುಂಡೂರಾವ್,** ಸಚಿವರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ

ರಾಜ್ಯದಲ್ಲಿ ಕಳೆದ ಕೆಲ ವರ್ಷಗಳಿಂದ ಸದ್ದಿಲ್ಲದೇ ಅಂಗದಾನ ಕ್ರಾಂತಿ ಮಹತ್ವ ಪಡೆದುಕೊಂಡಿದೆ. ಮಿದುಳು ನಿಷ್ಕ್ರಿಯಗೊಂಡವರಿಂದ ಅಂಗಾಂಗಗಳ ದಾನ ಪಡೆದು, ಚಿಕಿತ್ಸೆ ನಿರೀಕ್ಷೆಯಲ್ಲಿರುವ ವ್ಯಕ್ತಿಗಳ ಬದುಕಿಗೆ ಹೊಸ ಚೈತನ್ಯ ನೀಡುವ ಕಾಯಕ ಯಶಸ್ವಿಯಾಗಿ ನಡೆಯುತ್ತಿದೆ. ರಾಜ್ಯ ಸರ್ಕಾರದ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳ ಆಯುಕ್ತಾಲಯದಡಿ ರಾಜ್ಯ ಅಂಗಾಂಗ ಮತ್ತು ಅಂಗಾಂಶ ಕಸಿ ಸಂಸ್ಥೆ(ಎಸ್‌ಒಟಿಟಿಒ) ಜೀವಸಾರ್ಥಕತೆಯ ಕೆಲಸ ಮಾಡುತ್ತಿದೆ.

ರಾಜ್ಯದಲ್ಲಿಕಳೆದ2007ರಿಂದಜನವರಿ2025ರವರೆಗೆಅಂತ್ಯಕ್ಕೆ1,302ದಾನಿಗಳಿಂದ 3,649 ಅಂಗಾಂಗಗಳು, 2,687 ಅಂಗಾಂಶಗಳ ದಾನ ಪಡೆದಿದೆ. ಜೊತೆಗೆ, ಈವರೆಗೆ ಒಟ್ಟು 56,892 ಸಾರ್ವಜನಿಕರಿಂದ ಅಂಗದಾನಕ್ಕೆ ಪ್ರತಿಜ್ಞೆ ಪಡೆಯಲಾಗಿದ್ದು, 2024ನೇ ಸಾಲಿನಲ್ಲಿ ರಾಷ್ಟ್ರಮಟ್ಟದಲ್ಲಿ ರಾಜ್ಯಕ್ಕೆ 3ನೇ ಸ್ಥಾನ ಗಳಿಸಿದೆ.

ರಾಜ್ಯದ ನಾನಾ ಜಿಲ್ಲೆಗಳಿಂದ ಸಾಕಷ್ಟು ವ್ಯಕ್ತಿಗಳು ವಿವಿಧ ಅಂಗಾಂಗಗಳ ದಾನಿಗಳ ನಿರೀಕ್ಷೆಯಲ್ಲಿರುತ್ತಾರೆ. ಮೂತ್ರಪಿಂಡ, ಯಕೃತ್, ಹೃದಯ, ಸಣ್ಣ ಕರುಳು, ಶ್ವಾಸಕೋಶ, ಹೃದಯದ ಕವಾಟಗಳು, ಕಾರ್ನಿಯಾ ಸೇರಿ ನಾನಾ ಅಂಗಾಂಗಗಳ ನಿರೀಕ್ಷೆಯಲ್ಲಿ ರೋಗಿಗಳು ಕಾಯುತ್ತಾರೆ. ಈ ಪೈಕಿ ರಾಜ್ಯದಲ್ಲಿ ಪ್ರಸ್ತುತ ಮೂತ್ರಪಿಂಡ ಕಸಿಗಾಗಿ 5,009, ಯಕೃತ್ ಕಸಿ 679, ಹೃದಯದ ಕಸಿ 106, ಶ್ವಾಸಕೋಶದ ಕಸಿ 43, ಇನ್ನಿತರೆ ಸಂಯೋಜಿತ ಕಸಿಗಾಗಿ 68 ಸೇರಿದಂತೆ ಒಟ್ಟು 5,905 ವಿವಿಧ ಕಸಿಗಳಿಗೆ ವ್ಯಕ್ತಿಗಳು ನಿರೀಕ್ಷೆಯಲ್ಲಿದ್ದಾರೆ.

ಈ ವ್ಯಕ್ತಿಗಳಿಗೆ ಅಂಗಾಂಗ ದಾನಿಗಳೇ ಹೊಸ ಬದುಕನ್ನು ನೀಡಬೇಕಿರುತ್ತದೆ. ಟ್ರಾಮಾ ಕೇರ್ ಮತ್ತು ತುರ್ತು ಚಿಕಿತ್ಸಾ ಘಟಕಗಳು ಸೇರಿದಂತೆ ಸರ್ಕಾರಿ ವೈದ್ಯಕೀಯ ಕಾಲೇಜು, ಜಿಲ್ಲಾಸ್ಪತ್ರೆಗಳಲ್ಲಿ ನಾನ್ ಟ್ರಾನ್ಸ್‌ಪ್ಲಾಂಟ್ ಆರ್ಗನ್ ರಿಟ್ರೀವಲ್ ಸೆಂಟರ್(ಎನ್‌ಟಿಒಆರ್‌ಸಿ) ಗಳನ್ನು ಸ್ಥಾಪಿಸಲಾಗಿದೆ. ಈ ಕೇಂದ್ರಗಳಲ್ಲಿ ಮಿದುಳು ನಿಷ್ಕ್ರಿಯಗೊಂಡ ದಾನಿಗಳಿಂದ ಅಂಗಾಂಗಗಳನ್ನು ಪಡೆದು, ಕಸಿ ಕೇಂದ್ರಗಳಿಗೆ ಗ್ರೀನ್